# ಆಧ್ಯಾತ್ಮಿಕ ಸಾಧನೆ



❁ ಒಂದು ಪಕ್ಷ ಸಾವಿರಾರು ವರ್ಷಗಳಿಂದ ಒಂದು ಕೊಠಡಿ ಕತ್ತಲೆಯಾಗಿಯೇ ಇತ್ತು ಅಂತ ಇಟ್ಟುಕೊ. ಅಲ್ಲಿಗೆ ಬೆಳಕು ತಂದೊಡನೆಯೇ ಕತ್ತಲೆ ಪರಾರಿಯಾಗಿ ಬಿಡುತ್ತದೆ; ಕಿಂಚಿತ್ ಕಿಂಚಿತ್ತಾಗೇನೂ ಅಲ್ಲ. ಆಟವನ್ನು ನೀನು ನೋಡಿಲ್ಲವೆ? ಬಹಳ ಗಂಟು ಹಾಕಿರುವ ಒಂದು ಹಗ್ಗದ ತುದಿಯನ್ನು ಒಂದು ಆಸರೆಗೆ ಕಟ್ಟಿ, ಅದರ ಇನ್ನೊಂದು ತುದಿಯನ್ನು ತನ್ನ ಕೈಯಲ್ಲಿ ಹಿಡಿದುಕೊಳ್ಳುತ್ತಾನೆ. ಬಳಿಕ ಒಂದೆರಡು ಸಲ ಹಗ್ಗವನ್ನು ಅಲುಗಾಡಿಸುತ್ತಾನೆ. ಒಡನೇ ಗಂಟುಗಳೆಲ್ಲಾ ಬಿಚ್ಚಿಕೊಂಡು ಬಿಡುತ್ತವೆ. ಆದರೆ ಬೇರೆ ಯಾರೇ ಆಗಲಿ, ಎಷ್ಟೇ ಪ್ರಯತ್ನಪಟ್ಟರೂ ಅದನ್ನು ಬಿಚ್ಚಲಾಗುವುದಿಲ್ಲ. ಗುರುವಿನ ಕೃಪಾಬಲದಿಂದ ಅಜ್ಞಾನದ ಎಲ್ಲಾ ಗಂಟುಗಳು ಒಂದು ಮುಹೂರ್ತದಲ್ಲೇ ಬಿಚ್ಚಿಹೋಗಿಬಿಡುತ್ತವೆ.

❁ ಮುಖ್ಯವಾಗಿ ಮಾಡಬೇಕಾದ್ದು ಭಗವಂತನನ್ನು ಪ್ರೀತಿಸುವುದು, ಆತನ ಮಾಧುರ್ಯವನ್ನು ಸವಿಯುವುದು. ಆತ ರಸ, ಭಕ್ತ ಆಸ್ವಾದಕ. ಭಕ್ತ ಭಗವದಾನಂದವನ್ನು ಸವಿಯುತ್ತಾನೆ. ಆತ ತಾವರೆ ಹೂವು. ಭಕ್ತ ದುಂಬಿ. ಭಕ್ತ ತಾವರೆಹೂವಿನ ಮಧುವನ್ನು ಹೀರುತ್ತಾನೆ.

❁ ಭಗವಂತನಿಲ್ಲದೆ ಭಕ್ತನಿರಲಾರದ ಹಾಗೆ, ಭಕ್ತನಿಲ್ಲದೆ ಭಗವಂತನೂ ಇರಲಾರ. ಆಗ ಭಕ್ತ ರಸವಾಗುತ್ತಾನೆ, ಭಗವಂತ ಆಸ್ವಾದಕನಾಗುತ್ತಾನೆ. ಭಕ್ತ ತಾವರೆ ಹೂವು ಆಗುತ್ತಾನೆ, ಭಗವಂತ ದುಂಬಿಯಾಗುತ್ತಾನೆ. ಭಗವಂತ ತನ್ನ ಮಾಧುರ್ಯವನ್ನು ತಾನೇ ಆಸ್ವಾದಿಸಲೋಸುಗ ಎರಡಾಗಿದ್ದಾನೆ. ಈ ಕಾರಣದಿಂದಲೇ ರಾಧಾಕೃಷ್ಣ ಲೀಲೆ.

❁ ಆಧ್ಯಾತ್ಮಿಕ ಜೀವನದ ಮೊದಮೊದಲಲ್ಲಿ ತೀರ್ಥಯಾತ್ರೆ, ಕೊರಳಿಗೆ ರುದ್ರಾಕ್ಷಿ ಅಥವಾ ತುಳಸಿಮಾಲೆ, ಮಡಿ–ಇವನ್ನೆಲ್ಲಾ ಆಚರಿಸಬೇಕು. ವಸ್ತುಲಾಭವಾಯಿತೆಂದರೆ, ಭಗವದ್ದರ್ಶನ ದೊರೆಯಿತು ಎಂದರೆ ಬಾಹ್ಯಾಡಂಬರ ಕ್ರಮೇಣ ಕಡಿಮೆಯಾಗಿ ಬಿಡುತ್ತದೆ. ಬಳಿಕ ಉಳಿದುಕೊಳ್ಳುವ ಕೆಲಸ ಆತನ ನಾಮಜಪ ಮಾಡುವುದು ಮತ್ತು ಸ್ಮರಣ ಮನನ.

❁ ಯಾವ ಧರ್ಮವೇ ಆಗಲಿ, ಯಾವ ಮತವೇ ಆಗಲಿ, ಎಲ್ಲವೂ ಆ ಒಬ್ಬ ಭಗವಂತನನ್ನೇ ಕರೆಯುವಂತೆ ತಮ್ಮ ತಮ್ಮ ಅನುಯಾಯಿಗಳನ್ನು ಪ್ರೇರೇಪಿಸುತ್ತವೆ. ಆದ್ದರಿಂದ ಯಾವ ಧರ್ಮವನ್ನೇ ಆಗಲಿ, ಯಾವ ಮತವನ್ನೇ ಆಗಲಿ, ಅಶ್ರದ್ಧೆಯಿಂದ ನೋಡಕೂಡದು, ದ್ವೇಷಿಸಕೂಡದು. ಆ ಒಬ್ಬ ಭಗವಂತನನ್ನೇ ವೇದಗಳು ಸಚ್ಚಿದಾನಂದ ಬ್ರಹ್ಮ ಅಂತಲೂ, ಭಾಗವತಾದಿ ಪುರಾಣಗಳು ಸಚ್ಚಿದಾನಂದ ಕೃಷ್ಣ ಅಂತಲೂ, ತಂತ್ರಶಾಸ್ತ್ರ ಶಿವ ಅಂತಲೂ ಕರೆಯುತ್ತವೆ. ನಿಜವಾಗಿ ಇರುವವನು ಕೇವಲ ಆ ಸಚ್ಚಿದಾನಂದನೊಬ್ಬನೇ.

❁ ನಿಜವಾಗಿ ಇರುವುದು ಒಂದೇ ಹೊರತು ಎರಡಲ್ಲ. ಮನುಷ್ಯ ಭಗವಂತನನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಲಿ, ಹೃತ್ಪೂರ್ವಕವಾಗಿ ಭಗವಂತನನ್ನು ಕರೆದುದೇ ಆದರೆ ಆತ ಭಗವಂತನ ಸಾಕ್ಷಾತ್ಕಾರವನ್ನು ಪಡೆದೇ ಪಡೆಯುತ್ತಾನೆ. ವ್ಯಾಕುಲತೆ ಇತ್ತು ಎಂದರೆ ಜಯ.

❁ ಎಲ್ಲಿಯವರೆಗೆ 'ಭಗವಂತ ಕರ್ತ' ಎಂಬ ಜ್ಞಾನೋದಯವಾಗುವುದಿಲ್ಲವೊ, ಅಲ್ಲಿಯವರೆಗೆ ಮತ್ತೆ ಮತ್ತೆ ಈ ಜಗತ್ತಿಗೆ ಬರಲೇಬೇಕಾಗುತ್ತದೆ. ಮತ್ತೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. 'ಭಗವಂತ ಕರ್ತ' ಎಂಬ ಜ್ಞಾನೋದಯವಾಗಿ ಬಿಟ್ಟರೆ ಮತ್ತೆ ಜನ್ಮವೆತ್ತ ಬೇಕಾಗಿರುವುದಿಲ್ಲ.

❁ ಯಾವ ಚರ್ಮವನ್ನು ಮುಟ್ಟಲೇಕೂಡದೋ ಅದನ್ನು ಹದಮಾಡಿಬಿಟ್ಟದ್ದೇ ಆದರೆ ಅದನ್ನು ದೇವಾಲಯಕ್ಕೆ ಕೂಡ ತೆಗೆದುಕೊಂಡು ಹೋಗಿಬಿಡಬಹುದು. ಭಗವನ್ನಾಮೋಚ್ಚಾರಣೆಯಿಂದ ಮನುಷ್ಯ ಪವಿತ್ರನಾಗಿಬಿಡುತ್ತಾನೆ. ಆದ್ದರಿಂದ ನಾಮಕೀರ್ತನೆಯ ಅಭ್ಯಾಸವನ್ನಿಟ್ಟುಕೊಂಡಿರಬೇಕು.

❁ ಸಾವಿಗಾಗಿ ಸಿದ್ಧರಾಗಿರುವುದು ಮೇಲು. ಮುಪ್ಪಿನಲ್ಲಿ ನಿರ್ಜನ ಪ್ರದೇಶದಲ್ಲಿದ್ದು ಕೇವಲ ಭಗವಚ್ಚಿಂತನೆ, ಆತನ ನಾಮಗುಣಕೀರ್ತನೆ ಮಾಡುತ್ತಿರಬೇಕು. ಆನೆಯ ಮೈ ತೊಳೆದ ಮೇಲೆ ಅದನ್ನು ಗಜಶಾಲೆಯಲ್ಲಿ ಕಟ್ಟಿಹಾಕಿದರೆ, ಅದು ಮತ್ತೆ ಧೂಳು ಬೂದಿ ಇವನ್ನು ಮೈಗೆ ಮೆತ್ತಿಕೊಳ್ಳಲಾರದು.

❁ ಭಗವಂತನ ದರ್ಶನ ದೊರೆತರೆ ಎಲ್ಲಾ ಸಂದೇಹಗಳೂ ನಿವೃತ್ತಿಯಾಗಿಬಿಡುತ್ತವೆ. ಆಗ ಅನುಕೂಲವಾದ ಗಾಳಿ ಬೀಸಲಾರಂಭಿಸುತ್ತದೆ. ಭಕ್ತ ನಿಶ್ಚಿಂತನಾಗಿಬಿಡುತ್ತಾನೆ. ಅನುಕೂಲವಾದ ಗಾಳಿ ಬೀಸುವಾಗ ಯಾವ ರೀತಿಯಾಗಿ ಅಂಬಿಗ ನೌಕಾಪಟವನ್ನು ಬಿಚ್ಚಿ ಚುಕ್ಕಾಣಿ ಹಲಗೆಯನ್ನು ನೆಪಮಾತ್ರಕ್ಕೆ ಹಿಡಿದುಕೊಂಡು ನಿಶ್ಚಿಂತೆಯಿಂದ ಕುಳಿತು ಹುಕ್ಕ ಸೇದುತ್ತಾನೊ, ಆ ರೀತಿಯಾಗಿ ಭಕ್ತ ನಿಶ್ಚಿಂತನಾಗಿಬಿಡುತ್ತಾನೆ.

**ಶ್ರೀರಾಮಕೃಷ್ಣ ವಚನವೇದದಿಂದ**